# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/1980-2022
ಪಿಓ-ಎಆರ್‌ಇ-1 : ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 14/11/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಎನ್.ಬಿ.ನಿಂಗಾಚಾರಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಮಳಲ್ಕೆರೆ ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ – ಆದ ಇವರು** ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ದಾವಣಗೆರೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಎನ್.ಬಿ.ನಿಂಗಾಚಾರಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಮಳಲ್ಕೆರೆ ಗ್ರಾಮ ಪಂಚಾಯಿತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರನ್ನು ದೂರುದಾರರಾದ **ಶ್ರೀ ಎಸ್.ಎನ್.ಮಹೇಶ್ವರಪ್ಪ, ಬಿನ್ ಎಸ್.ಎಂ.ನೀಲಪ್ಪ, ಕಾಶಿಪುರ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ :** ದೂರುದಾರರು ತನ್ನ ದೂರಿನಲ್ಲಿ, ತನಗೆ ದಾವಣಗೆರೆ ತಾಲ್ಲೂಕು, ಮಳಲ್ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಕಾಶಿಪುರ ಗ್ರಾಮದ ಖಾನೇಷ್‌ಮಾರಿ ನಂ: 146 ರಲ್ಲಿ ಒಟ್ಟು 60*80 ಅಡಿ ಉದ್ದಗಲದ ವಿಸ್ತೀರ್ಣದ ಜಾಗ ಇದ್ದು, ಸದರಿ ಜಾಗವು ದೂರುದಾರರ ತಂದೆ: ನೀಲಪ್ಪ ಮತ್ತು ಅವರ ದೊಡ್ಡಪ್ಪ ದೇವೆಂದ್ರಪ್ಪ ರವರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಸ್ವತ್ತಿನಲ್ಲಿ ಉತ್ತರ-ದಕ್ಷಿಣವಾಗಿ 80 ಅಡಿ, ಪೂರ್ವ-ಪಶ್ಚಿಮವಾಗಿ 25 ಅಡಿ, ವಿಸ್ತೀರ್ಣದ ಸ್ವತ್ತು ದೂರುದಾರರ ತಂದೆಗೆ ಬಂದಿರುತ್ತದೆ. ಸದರಿ ಜಾಗದಲ್ಲಿ ಉತ್ತರ-ದಕ್ಷಿಣವಾಗಿ 54 ಅಡಿ, ಪೂರ್ವ-ಪಶ್ಚಿಮವಾಗಿ 25 ಅಡಿ ಜಾಗದಲ್ಲಿ ಮನೆಯನ್ನು ನಿರ್ಮಿಸಿದ್ದು, ಉತ್ತರ ದಕ್ಷಿಣವಾಗಿ 26 ಅಡಿ ಖಾಲಿ ಜಾಗವನ್ನು ದೂರುದಾರರ ಮನೆ ಹಿಂಬಾಗದಲ್ಲಿ ಉಪಯೋಗಕ್ಕಾಗಿ ಬಿಟ್ಟುಕೊಂಡಿರುವುದಾಗಿ ಹೇಳಿರುತ್ತಾರೆ.

3. ತಮ್ಮ ಮನೆಯ ಹಿಂಭಾಗದಲ್ಲಿ ಉತ್ತರ-ದಕ್ಷಿಣವಾಗಿ ಸುಮಾರು 60 ಅಡಿ ಸರ್ಕಾರಿ ಜಾಗ ಇದ್ದು, ಸದರಿ ಜಾಗವನ್ನು 1) ಗೌಡ ವಾಗೀರಪ್ಪ ಬಿನ್ ಚಂದ್ರಪ್ಪ, 2) ರಾಜಪ್ಪ ಬಿನ್ ಹಾಲಪ್ಪ 3) ಷಣ್ಮುಖಪ್ಪ ಬಿನ್ ಬಸಪ್ಪ ಇವರಿಗೆ ಪಂಚಾಯಿತಿಯವರು ಹಂಗಾಮಿಯಾಗಿ ಖಾತೆಯನ್ನು ಮಾಡಿಕೊಟ್ಟಿರುತ್ತಾರೆ. ಮೇಲ್ಕಂಡ ಮೂರು ಜನರು ಪ್ರಸ್ತುತ ದೂರುದಾರರ ಸ್ವಾಧೀನದಲ್ಲಿರುವ ಜಾಗದಲ್ಲಿ ತಮ್ಮ ಜಾಗವಿದೆ ಎಂದು ದಾವಣಗೆರೆ ತಾಲ್ಲೂಕು ಪಂಚಾಯಿತಿಯ ಕೋರ್ಟ್‌ನಲ್ಲಿ, ದೂರುದಾರರ ಮತ್ತು ಮಳಲ್ಕೆರೆ ಗ್ರಾಮ ಪಂಚಾಯಿತಿಯ ವಿರುದ್ಧ ಕೇಸ್ ಹಾಕಿಕೊಂಡಿರುತ್ತಾರೆ. ಪ್ರಸ್ತುತ ಸದರಿ ಕೇಸ್ ವಿಚಾರಣೆಯಲ್ಲಿದೆ.

4. ಸದರಿ ಕೇಸ್‌ನಲ್ಲಿ ರವಿಕುಮಾರ್ ಎಂಬುವವರನ್ನು ವಕೀಲರನ್ನಾಗಿ ನೇಮಿಸಿದ್ದು, ಪಂಚಾಯಿತಿ ಪರವಾಗಿ ಕೋರ್ಟ್‌ನಲ್ಲಿ ಕೇಸ್ ನಡೆಸುತ್ತಿರುತ್ತಾರೆ. ದಿನಾಂಕ: 20-09-2019 ಮತ್ತು ದಿನಾಂಕ: 21-09-2019 ರಂದು ಎದುರುದಾರರು ತಮ್ಮ ಪೋನ್ ನಂ: 9740340674 ರಿಂದ ದೂರುದಾರರ ಪೋನ್ ನಂ: 9964190858 ಗೆ ಪೋನ್ ಮಾಡಿ, ವಕೀಲರಿಗೆ ವಾದ ಮಾಡಿದ್ದಕ್ಕೆ 5500/- ರೂಪಾಯಿ ಕೊಡು, ನಿನಗೆ ಓಡಾಡಿಸೊಲ್ಲ. ಲಾಸ್ಟ್ ಜಡ್ಜ್‌ಮೆಂಟ್ ದಿನಾನೆ ಕರೆಯೋದು ಅಂತ ಹೇಳಿದ್ದು, ಅದಕ್ಕೆ ದೂರುದಾರರು, ವಕೀಲರಿಗೆ ತಾನಾಕೆ ದುಡ್ಡು ಕೊಡಬೇಕು, ಪಂಚಾಯಿತಿಯವರು ಕೊಡಬೇಕಲ್ಲ ಅಂದಿದ್ದಕ್ಕೆ, ಎದುರುದಾರರು ಇಲ್ಲಾ ಅದು ಆ ತರ ಅಲ್ಲಾ, ವಕೀಲರು ನಮ್ಮ ಆಫೀಸ್‌ಗೆ ಬಿಲ್ ಕಳಿಸ್ತಾರೆ, ನಾವು ಯಾರದು ಕೇಸ್ ಇರುತ್ತೊ ಅವರ ಹತ್ತಿರ ಇಸ್ಕೊಂಡು ಕೊಡ್ತಿವಿ ಅಂದಿದ್ದಕ್ಕೆ, ದೂರುದಾರರು 5500/- ರೂ ಜಾಸ್ತಿ ಆಯ್ತು ಸಾರ್ ಕಡಿಮೆ ಮಾಡಿಕೊಳ್ಳಿ, ಅಂದಿದ್ದಕ್ಕೆ, ಇಲ್ಲಪ್ಪಾ ನೀನು ರೂ.500/- ಕಡಿಮೆ ಕೊಡು ನಾನ್ ಹೇಳ್ತಿನಿ ಅಂತ 5000/- ರೂ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದೂರುದಾರರು ದಿನಾಂಕ: 25-09-2019 ರಂದು ಮದ್ಯಾಹ್ನದ ಸುಮಾರಿಗೆ ಪಂಚಾಯ್ತಿ ಪರ ವಕೀಲರಾದ ಶ್ರೀ ರವಿಕುಮಾರ್ ರವರ ಮೊ: ಸಂಖ್ಯೆ: 9845330045 ಗೆ ತನ್ನ ಮೊಬೈಲ್ ನಿಂದ ಕರೆ ಮಾಡಿ, ನೀವು ಪಂಚಾಯಿತಿ ಜಾಗದ ಬಗ್ಗೆ ವ್ಯಾಜ್ಯದ ಸಂಬಂಧ ನಿಮಗೆ ದುಡ್ಡು ಕೊಡಬೇಕೆಂದು ಕೇಳಿರುತ್ತಾರೆ ಎಂದು ತಿಳಿಸಿದಾಗ, ವಕೀಲರು, ನಾನು ಪಂಚಾಯ್ತಿ ಪರವಾಗಿ ವಾದ ಮಾಡುತ್ತಿದ್ದು, ಪಂಚಾಯಿತಿಯವರೇ ನನಗೆ ರೂ.5000/- ಕೊಡುತ್ತಾರೆ. ನಿಮ್ಮಿಂದ ನನಗೆ ಒಂದು ಪೈಸೆಯು ಬೇಡ, ನೀವು ಕೊಡುತ್ತೇನೆಂದರೂ ನಾನು ಪಡೆದುಕೊಳ್ಳುವುದಿಲ್ಲ, ನೀವು ಕೊಡಬೇಡಿ ಎಂದು ತಿಳಿಸಿರುತ್ತಾರೆ. ಹಾಗಾಗಿ, ಇ.ಓ. ಕೋರ್ಟ್‌ನಲ್ಲಿ ನಡೆಯುತ್ತಿರುವ ಪಂಚಾಯಿತಿ ಸ್ವತ್ತಿನ ವ್ಯಾಜ್ಯದ ಪ್ರಕರಣದ ಕೇಸ್ ನಡೆಸಲು, ಪಂಚಾಯಿತಿ ವಕೀಲರಿಗೆ ಕೊಡಬೇಕೆಂದು ಎದುರುದಾರರು ಅಕ್ರಮವಾಗಿ 5000/- ರೂ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ದಿನಾಂಕ: 20/09/2019 ಮತ್ತು ದಿನಾಂಕ: 21/09/2019 ರಂದು ಎದುರುದಾರರು ದೂರುದಾರರಿಗೆ ಪೋನ್ ಮಾಡಿ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಹಾಗೂ ದಿ: 25/09/2019 ರಂದು ಎದುರುದಾರರು ಪಂಚಾಯ್ತಿ ಪರ ವಕೀಲರಾದ ರವಿಕುಮಾರ್ ರೊಂದಿಗೆ ದೂರುದಾರರು ಮೊಬೈಲ್ ನಲ್ಲಿ ಮಾತನಾಡಿದ್ದನ್ನು, ತನ್ನ ರೆಡ್‌ಮಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ, ದಿನಾಂಕ: 20/09/2019 ರಂದು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಾವಣಗೆರೆ, ಇವರಿಗೆ ಎದುರುದಾರರ ವಿರುದ್ಧ ದೂರನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆಯ ಸಿಡಿಯನ್ನು ಹಾಜರುಪಡಿಸಿರುತ್ತಾರೆ.

ಅದರಂತೆ, ಮೊಕದ್ದಮೆ ಸಂಖ್ಯೆ : 10/2019 ಪಿಸಿ ಕಾಯ್ದೆ 1988 ಕಲಂ 7 ರನ್ವಯ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

5. ದಿನಾಂಕ: 25/09/2019 ರಂದು ತನಿಖಾಧಿಕಾರಿಯವರು ಪಂಚರುಗಳಾದ ಶ್ರೀ ಸೊಪ್ಪಿನ ಕೇಶವ, ಮತ್ತು ಶ್ರೀ ಅಭಿರೂಪ್.ಟಿ.ಆರ್. ಇವರುಗಳನ್ನು ಬರಮಾಡಿಕೊಂಡು, ಇವರಿಗೆ ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ ರೂ.5000/– (ಹಣದ ಡಿನಾಮಿನೇಷನ್ 500 X 6 & 2000 x 1 = 5000/- ರೂ.ಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿ ಸೂಚನೆ ಮೇರೆಗೆ, ಪಂಚ–2 ಶ್ರೀ ಅಭಿರೂಪ್.ಟಿ.ಆರ್ ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದಾಗ, ಪಂಚ–1 ಶ್ರೀ ಸೊಪ್ಪಿನ ಕೇಶವ ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ–1 ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 5000/– ರೂ.ಗಳ ಲಂಚದ ಹಣವನ್ನು ಎಣಿಸಿ, ದೂರುದಾರರು ಧರಿಸಿದ ಪ್ಯಾಂಟಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ತಲೆಯನ್ನು ಕೆರೆದುಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆ ನೀಡಿ, ಪಂಚ–2 ರವರು ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್ದರ್ ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ದಿನಾಂಕ: 25/09/2019 ರಂದು ಪಂಚರ ಸಮಕ್ಷಮ ಸಂಜೆ : 5.15 ಗಂಟೆಗೆ ಪ್ರಾರಂಭಿಸಿ ರಾತ್ರಿ: 7.15 ಗಂಟೆಯವರೆಗೆ ಬರೆದಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ದೂರುದಾರರು ಮೊಬೈಲ್ ನಂ: 9964190858 ರಿಂದ ಎದುರುದಾರರ ಮೊಬೈಲ್ ನಂ: 9740340674 ಪೋನ್ ಮಾಡಿ, ಹಣ ಹೊಂದಿಸಿಕೊಂಡ ಬಗ್ಗೆ ತಿಳಿಸಿದಾಗ, ಎದುರುದಾರರು ಈಗ ಅರ್ಜೆಂಟ್ ಆಗಿ ಬೇರೆ ಕಡೆ ಹೋಗಬೇಕು, ನಾಳೆ ಬೆಳಿಗ್ಗೆ : 9.30 ಗಂಟೆಗೆ ಕಛೇರಿಗೆ ಹೋಗುವಾಗ ಪಡೆಯುತ್ತೇನೆಂದು ತಿಳಿಸಿದ ಮೇರೆಗೆ, ತನಿಖಾಧಿಕಾರಿಯು ಟ್ರಾಪ್ ಕಾರ್ಯಾಚರಣೆಯನ್ನು ದಿ: 26/09/2019 ಕ್ಕೆ ಬೆಳಿಗ್ಗೆ 8.00 ಗಂಟೆಗೆ ಮುಂದೂಡಿ, ಎಲ್ಲರೂ ಬರುವಂತೆ ತಿಳಿಸಿ, ಆ ಸಂಬಂಧವಾಗಿ ಟ್ರಾಪ್ ಮುಂದೂಡಿದ ಪಂಚನಾಮೆಯನ್ನು ಪಂಚರ ಸಮಕ್ಷಮ ರಾತ್ರಿ 7.30 ಯಿಂದ ರಾತ್ರಿ 8.00 ಗಂಟೆಯವರೆಗೆ ಬರೆದಿರುತ್ತಾರೆ.

6. ದಿನಾಂಕ: 26/09/2019 ರಂದು ತನಿಖಾಧಿಕಾರಿಯು, ಪಂಚರನ್ನು, ಸಿಬ್ಬಂದಿಯನ್ನು ಹಾಗೂ ದೂರುದಾರರನ್ನು ಬರಮಾಡಿಕೊಂಡು, ದೂರುದಾರರಿಗೆ ದಿ: 25/09/2019 ಪ್ರಾಯೋಗಿಕ ಪಂಚನಾಮೆಯ ಪ್ರಕ್ರಿಯೆಯನ್ನು ಮತ್ತೊಮ್ಮೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ, ದೂರುದಾರರು ಬೆಳಿಗ್ಗೆ 9.00 ಗಂಟೆಗೆ ಎದುರುದಾರರಿಗೆ ಪೋನ್ ಮಾಡಿ ಮಾತನಾಡಿದಾಗ, ಎದುರುದಾರರು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡ್ ಸಮೀಪ ಬರುವಂತೆ ತಿಳಿಸಿದ ವಿಚಾರವನ್ನು

ದೂರುದಾರರು ತನಿಖಾಧಿಕಾರಿಗೆ ತಿಳಿಸಿರುತ್ತಾರೆ. ಅದರಂತೆ, ತನಿಖಾಧಿಕಾರಿ ಸಿಬ್ಬಂದಿಯನ್ನು ಮತ್ತು ದೂರುದಾರರನ್ನು ಕರೆದುಕೊಂಡು ಮೇಲ್ಕಂಡ ಸ್ಥಳಕ್ಕೆ ಬಂದಿರುತ್ತಾರೆ. ನಂತರ, ತನಿಖಾಧಿಕಾರಿ ದೂರುದಾರರನ್ನು ಹಾಗೂ ಪಂಚ ಶ್ರೀ ಅಭಿರೂಪ್ ಟಿ.ಆರ್. ಇವರಿಗೆ ಮತ್ತೊಮ್ಮೆ ಸೂಚನೆ ನೀಡಿ, ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ನಂತರ, ಬೆಳಿಗ್ಗೆ 10.10 ಗಂಟೆಯ ಸುಮಾರಿಗೆ ದೂರುದಾರರ ಬಳಿ ಒಬ್ಬ ಅಸಾಮಿ ಕೆ-17-ಇವೈ-8618 ಹೊಂಡಾ ಶೈನ್ ಬೈಕ್ ನಲ್ಲಿ ಬಂದು ದೂರುದಾರರ ಜೊತೆ ಮಾತನಾಡಿ, ಅವರಿಂದ ಹಣವನ್ನು ಪಡೆದಿದ್ದು, ಆ ಸಮಯದಲ್ಲಿ ದೂರುದಾರರು ತನಿಖಾಧಿಕಾರಿಯವರಿಗೆ ನಿಗದಿತ ಸೂಚನೆ ನೀಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 10-15 ಗಂಟೆಯಾಗಿರುತ್ತದೆ. ತಕ್ಷಣ ದೂರುದಾರರ ಸೂಚನೆಯನ್ನು ಅನುಸರಿಸಿ, ತನಿಖಾಧಿಕಾರಿ ಸ್ಥಳಕ್ಕೆ ಬಂದು ದೂರುದಾರರನ್ನು ಭೇಟಿ ಮಾಡಿ ವಿಚಾರಿಸಿರುತ್ತಾರೆ. ಆಗ ದೂರುದಾರರು ತನ್ನಿಂದ ಲಂಚದ ಹಣವನ್ನು ಸ್ವೀಕರಿಸಿದ ಎದುರುದಾರರನ್ನು ತನಿಖಾಧಿಕಾರಿಗೆ ತೋರಿಸಿಕೊಟ್ಟು, ಲಂಚದ ಹಣವನ್ನು ಬಲಗೈಯಿಂದ ಪಡೆದು ಎರಡೂ ಕೈಗಳಿಂದ ಎಣಿಸಿ, ತನ್ನ ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡ ಬಗ್ಗೆ ತಿಳಿಸಿರುತ್ತಾರೆ.

7. ನಂತರ, ತನಿಖಾಧಿಕಾರಿ ಎದುರುದಾರರನ್ನು ವಿಚಾರಣೆ ಮಾಡಿರುತ್ತಾರೆ. ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿಯವರು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಎದುರುದಾರರು ತಮ್ಮ ಶರ್ಟಿನ ಎದೆಯ ಜೇಬಿನಲ್ಲಿ ಇದ್ದ ಲಂಚದ ಹಣ 5000/- ರೂ ಗಳನ್ನು ಹಾಜರುಪಡಿಸಿರುಪಡಿಸಿರುತ್ತಾರೆ. ನಂತರ, ಪಂಚರು ಸದರಿ ಹಣದ ಮೌಲ್ಯ ಮತ್ತು ನಂಬರನ್ನು ವಹಿಸುವಿಕೆ ಪಂಚನಾಮೆಯ ವೇಳೆಯಲ್ಲಿ ಬರೆದ ಮಹಜರ್‌ಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡ, ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿ ಎದುರುದಾರರ ಶರ್ಟಿನ ಎಡ ಎದೆಯ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ತನಿಖಾಧಿಕಾರಿಯವರು ಎದುರುದಾರರು ಲಂಚದ ಹಣ ಪಡೆದ ಬಗ್ಗೆ ವಿವರಣೆಯನ್ನು ಕೇಳಿದ್ದು, ಅದರಂತೆ ಎದುರುದಾರರು ವಿವರಣೆಯನ್ನು ನೀಡಿದ್ದು, ಅದರಲ್ಲಿ ...."**ಮಳಲ್ಕೆರೆ ಗ್ರಾಮ ಪಂಚಾಯಿತಿಯ ಪಿಡಿಓ ಆದ ನಾನು ದಿ: 26/09/2019 ರಂದು ಕಾಶಿಪುರ ಗ್ರಾಮದ ಎಸ್.ಎನ್.ಮಹೇಶ್ವರಪ್ಪ ಬಿನ್ ಎಸ್.ಎನ್. ನೀಲಪ್ಪ ಇವರಿಂದ ರೂ. 5000/- ರೂಗಳನ್ನು ಇವರ ಮನೆಯ ಹಾಗೂ ಖಾಲಿ ಜಾಗದ ಕೇಸು ಸಲುವಾಗಿ ವಕೀಲರನ್ನು ಅವರ ಪರವಾಗಿ ನೇಮಿಸುವ ಸಲುವಾಗಿ ಹಣವನ್ನು ಪಡೆದಿರುವುದು ಎಂದು ಈ ಮೂಲಕ ಸಲ್ಲಿಸಿದೆ**". ಎಂದು ಸಲ್ಲಿಸಿರುತ್ತಾರೆ. ಸದರಿ ಹೇಳಿಕೆಯ ಬಗ್ಗೆ, ತನಿಖಾಧಿಕಾರಿಯು ದೂರುದಾರರ ಅಭಿಪ್ರಾಯವನ್ನು ಕೇಳಿದಾಗ, ಎದುರುದಾರರ ಸಮಜಾಯಿಷಿಯನ್ನು ಒಪ್ಪಿರುವುದಿಲ್ಲ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ದಿ: 26/09/2019 ರಂದು ಬೆಳಿಗ್ಗೆ 10.40 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಹಣ ಜಪ್ತಿ ಪಂಚನಾಮೆಯನ್ನು ಬರೆದಿರುತ್ತಾರೆ.

8. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯವರು ಎದುರುದಾರರಿಂದ ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

9. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

10. ಗೌರವಾನ್ವಿತರ ಆದೇಶದ ಅನ್ವಯ, ದಿನಾಂಕ: 07/07/2022ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 02/08/2022 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ಪರಿಶೀಲನಾ ಟಿಪ್ಪಣಿಯ ಖಂಡಿಕೆ 1, 2(i) ರಿಂದ (v), 3ರ ಅಂಶಗಳನ್ನು ಸಾರಾಸಗಟಾಗಿ ಅಲ್ಲಗಳೆದಿರುತ್ತಾರೆ ಹಾಗೂ ತನ್ನ ವಿರುದ್ಧ ಮಾನ್ಯ ಪ್ರಧಾನ ಜಿಲ್ಲಾ ಸತ್ರ ಹಾಗೂ ವಿಶೇಷ ನ್ಯಾಯಾಲಯ, ದಾವಣಗೆರೆ, ಇಲ್ಲಿ ವಿಶೇಷ ಪ್ರಕರಣದ ಸಂಖ್ಯೆ : 10/2019 ರಲ್ಲಿ ನಡೆಯುತ್ತಿರುತ್ತದೆ. ತಾನು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲ, ತನ್ನ ವಿರುದ್ಧ ದೂರುದಾರರು ಸುಳ್ಳು ಆಪಾದನೆ ಮಾಡಿರುತ್ತಾರೆ. ಆದ್ದರಿಂದ, ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಒಪ್ಪಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ಎದುರುದಾರರು ದುರ್ನಡತೆ ಎಸಗಿರುವುದು ಕಂಡು ಬರುತ್ತದೆ.

11. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ ಶ್ರೀ ಎನ್.ಬಿ.ನಿಂಗಾಚಾರಿ (ನಿವೃತ್ತಿ ದಿನಾಂಕ: 30-06-2026) ತಮ್ಮ ಕರ್ತವ್ಯದಲ್ಲಿ, ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು (03) ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/11/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು